Reg.No. M. 1550.
KODAGU MERCARA, (Coorg).

ಕೊಡಗು

ಸಂಪಾದಕರು:–ಶ್ರೀ ಪಿ. ಐ. ಬೆಳ್ಯಪ್ಪ, ವಾರ್ಷಿಕ ಚಂದಾ: ರೂ: ೩–೮–೦.

ಸಂಪುಟ ೨೪ | ತಾರೀಕು ೧––೯––೧೯೪೪ನೇ ಶುಕ್ರವಾರ. | ಸಂಚಿಕೆ ೧೩

ಪಂಚ ವರ್ಷಗಳ ಯುದ್ಧ.

ಕಳೆದ ಮೇ ತಿಂಗಳ ಮಧ್ಯದಿಂದ ಆಗೋಸ್ಟ್ ತಿಂಗಳ ವರೆಗಿನ ಯುದ್ಧ ಇತಿಹಾಸವು ಸ್ಮರಣೀಯವಿದೆ. ಜೂನ್ ಮತ್ತು ಜುಲೈಯಲ್ಲಿ ಆದ ಯುದ್ಧ ಘಟನೆಗಳು ಇತಿಹಾಸದಲ್ಲಿ ಸ್ಪಷ್ಟವೇಕವಾಗಿ ಗುರುತಿಡತಕ್ಕವು. ಕಳೆದ ಐದು ಜೇಸಗೆಗಳಲ್ಲಿ ಯುದ್ಧ ಕಾರ್ಯಗಳು ಹೇಗೆ ಸಾಗಿದುವು ಎಂಬುದನ್ನು ನೋಲಿಯ ಮೇಲೆ ಅವಲೋಕಿಸಿದರೆ ಅವರ ಸ್ಪಷ್ಟ ಚಿತ್ರವು ಬರುವುದು. ಅದರಲ್ಲಿ ನಾವು, ಜರ್ಮನ್ ಸೈನ್ಯದ ಅಭಿವೃದ್ಧಿ, ಪ್ರಬಲತೆಗಳನ್ನು ಮಾತ್ರವಲ್ಲ ಹಿಟ್ಲರರ ಯುದ್ಧ ಯಂತ್ರಾದಿಗಳು ಕ್ಷೀಣತೆಹೊಂದಿ, ಯುದ್ಧದಲ್ಲಿ ಸ್ಥಿತ್ಯಂತರವನ್ನು ತಂದುದನ್ನು ಕಾಣುವೆವು. ಈ ಮೊದಲು ಕಳೆದ ಐದು ವರ್ಷದ ಜೂನ್ ಮತ್ತು ಜುಲಾಯಿ ತಿಂಗಳಲ್ಲಿ ಉಂಟಾದ ಮುಖ್ಯವಾದ ಯುದ್ಧಗತಿಯನ್ನು ಮಾತ್ರ ನಿರೂಪಿಸುವೆವು.

೧೯೪೦.

ಜರ್ಮನ್ ಸೈನ್ಯಗಳು ಬೆಲ್ಜಿಯಮ್, ನದರ್‌ಲೇಂಡ್ಸ್‌ಹಾಗೂ ಫ್ರಾನ್ಸಿಗೆ ಡಿನಾಡಿನ ಮೂಲಕ ಜಳಸರಿದುವು. ಪರಿಣಾಮವಾಗಿ ಮೇ ತಿಂಗಳ ಕೊನೆಯಲ್ಲಿ ಮತ್ತು ಜೂನ್ ಪ್ರಥಮದಲ್ಲಿ ಬ್ರಿಟಿಷ್ ಸೇನೆಗಳು ಡಂಕರ್ಕ್‌ನಿಂದ ಕಂಬಿಕಿತ್ತವು. ಜೂನ್ 14ರಲ್ಲಿ ಪೇರಿಸ್ ಆಕ್ರಮಿಸಲ್ಪಟ್ಟಿತು. ಹಾಗೂ ಜೂನ್ 22ರಲ್ಲಿ ಫ್ರಾನ್ಸಿನೊಡನೆ ತಾತ್ಕಾಲಿಕ ಸಂಧಿಯೇರ್ಪಟ್ಟಿತು. ಆದರಿಂದ ಫ್ರಾನ್ಸನ್ನು ಮಿತ್ರತೆಯಲ್ಲೇ ಬಿಟ್ಟುಬಿಡಬೇಕಾಯಿತು. ಗ್ರೇಟ್ ಬ್ರಿಟನ್ ಪೂರ್ಣ ಏಕಾಂಗಿಯಾಗಿಯೇ ಎದುರಿಸಿತು. ಜುಲೈ ಮತ್ತು ಆಗೋಸ್ಟ್‌ನಲ್ಲಿ ಗ್ರೇಟ್ ಬ್ರಿಟನಿನ ಮೇಲೆ ಅತ್ಯುಗ್ರವಾದ ಏರ್ ಮೂನ ದಾಳಿ ಮಾಡಲ್ಪಟ್ಟಿತು. ಇವು ಬ್ರಿಟನಿನ ಮೇಲೆ ನಾಝಿ ಸೈನ್ಯದ ಆಕ್ರಮಣದ ಪೀಠಿಕೆಯಾದವು.

೧೯೪೧.

ಯುಗೋಸ್ಲೇವಿಯಾ ಮತ್ತು ಗ್ರೀಸ್‌ಗಳ ಆಕ್ರಮಣಾನಂತರ, ಜರ್ಮನರು ಮೇ ತಿಂಗಳಲ್ಲಿ ಕ್ರೀಟಿನ ಮೇಲೆ ವಾಯುಮಾರ್ಗವಾಗಿ ದಂಡೆತ್ತಿಬಂದರು. ಈ ದ್ವೀಪವು ಇಂಗ್ಲೆಂಡಿನ ಆಕ್ರಮಣ ಸಿದ್ಧತೆಗೆ ಅಚ್ಚುಕಟ್ಟಿನ ಸ್ಥಳವೆಂದು ಹಿಟ್ಲರರು ಊಹಿಸಿದ್ದರು. ಆದರೆ ಜರ್ಮನಿಗೆ ಹೆಚ್ಚು ಯುದ್ಧ ನೌಕೆಗಳ ಅಗತ್ಯವಿತ್ತು. ಆದುದರಿಂದ ಹಿಟ್ಲರರೂ ಇಂಗ್ಲೆಂಡನ್ನು ಕುರಿತಾದೆ ತನ್ನ ಆಲೋಚನೆಯನ್ನು ಪೂರ್ವಕ್ಕೆ ತಿರುಗಿಸಿದರು. ಜೂನ್ 22ರಲ್ಲಿ ಅವರು ಸೋವಿಯೆಟ್ ಯೂನಿಯನಿಗೆ ದಂಡೆತ್ತಿ ಬಂದರು. ಒಂದು ತಿಂಗಳ ಮೇಲೆ ಜರ್ಮನ್ ಸೇನೆಗಳು ಸ್ಮೋಲೆನ್ಸ್ಕ್ ಮತ್ತು ಕೀವ್ ಪಟ್ಟಣಗಳನ್ನು ಕಲಪಿದವು. ರಷ್ಯನ್ ಸೈನ್ಯವು ತನ್ನ ಅತ್ಯಂತ ಪ್ರಾಮುಖ್ಯ ರಕ್ಷಣಾ ಕ್ಷೇತ್ರದಿಂದ ಛಿಟ್ಟಲ್ಪಡುವುದೆಂದು ತೋರಿತು.

೧೯೪೨.

ಆಫ್ರಿಕಾದಲ್ಲಿ ವಿಜಯವನ್ನು ಸಲಿಸುತ್ತ, ರೊಮೆಲ್ಲರು ಬ್ರಿಟಿಷರ ರಕ್ಷಣಾಬಲವನ್ನು ಜೇಧಿಸಲು ಶಕ್ಯರಾದರು. ಮುನ್ನುಗ್ಗುತ್ತ ಕೈರೋ ಮತ್ತು ಅಲೆಕ್ಸ್ಯಾಂಡ್ರಿಯಾದ ಬಾಗಿಲಲ್ಲಿದ್ದ ಎಲ್‌ಎಲ್ಲೆಮಿನನ್ನು ತಲಪಿದರು. ಮುಂದೆ ಟೋಬ್ರುಕ್‌ದ ಪತನವಾಯಿತು. ಸೆಬೆಸ್ಟೊಪೊಲ್ ಪತನದ ಮೇಲೆ ಜರ್ಮನ್ ಸೈನ್ಯಗಳು ರಷ್ಯದಲ್ಲಿ ಒಂದು ಹೊಸ ಧಾಳಿಯನ್ನಾರಂಭಿಸಿ ಪ್ರಥಮತಃ ಒರೋನೆಝ್ ಕಡೆಗೂ ಕಾಕಸಸ್, ಸ್ಟಾಲಿನ್‌ಗ್ರಾಡನ್ನು ಆಕ್ರಮಿಸಿದುವು.

ಪೂರ್ವ ಏಶ್ಯದಲ್ಲಿ ಜಪಾನರು ಫಿಲಿಪ್ಪೈನ್ಸ್, ಮಲಯ, ಸಿಂಗಾಪುರ, ಬರ್ಮಾ ಮತ್ತು ನದರ್‌ಲೇಂಡ್ಸ್ ಇಂಡೀಸ್‌ಗಳನ್ನು ಜಯಿಸಿದ ತರುವಾಯ, ಆಸ್ಟ್ರೇಲಿಯಾವನ್ನು ಆಕ್ರಮಿಸಲು ಸಿದ್ಧತೆ ಮಾಡಿದರು. ಅವರು ನ್ಯೂಗಿನಿಯಾದಲ್ಲಿ ತಳವೂರಿದರು, ಸೊಲೊಮನ್ ದ್ವೀಪಗಳ ಕಡೆಗೆ ಮುಂದೆ ಪ್ರವೇಶಿಸಿದರು. ಪೋರ್ಟ್‌ಡಾರ್ವಿನನ್ನು ವಿಮಾನ ದಳದಿಂದ ಆಕ್ರಮಿಸಿದರು. ಮತ್ತು ಹವಳ ಸಮುದ್ರದಲ್ಲಿ ಯುದ್ಧ ನೌಕೆಗಳ ಕಾರ್ಯಾಚರಣೆಯಾಗಿ ಸಿದರು. ಇವೆಲ್ಲವೂ ಆಕ್ಸಿಸ್‌ಗೂದ ವಿಜಯ ಸಂಪಾದನೆಗೆ ಜನರು ಮಾಡಿದ ಹೆಜ್ಜೆಗಳಾಗಿದ್ದವು.

ಆ ಮೇಲೆ ಸ್ಥಿತ್ಯಂತರವು ಬಂದಿತು. ಆಫ್ರಿಕಾದ ಜರ್ಮನ್ ಸೇನೆಯು ಕೈರೋ ಮತ್ತು ಅಲೆಕ್ಸ್ಯಾಂಡ್ರಿಯಾಕ್ಕೆ ಮುಟ್ಟಲಿಲ್ಲ.

ಜರ್ಮನ್ ಸೇನೆಗಳು ಸ್ಟಾಲಿನ್‌ಗ್ರಾಡನ್ನು ಗೆಲ್ಲಲಿಲ್ಲ.

ಜಪಾನರು ಆಸ್ಟ್ರೇಲಿಯಾಕ್ಕೆ ಪಾದ್ರಾರ್ಪಣ ಮಾಡಲಿಲ್ಲ.

೧೯೪೩.

ರಷ್ಯದಲ್ಲಿ ಜರ್ಮನರ ಮೂರನೆಯ ಬೇಸಗೆಯು ದಾಳಿಯು ಕುರಸ್ಕ್ ನದಲ್ಲಿ ದಾಳಿ ನಡೆಸುವ ಮೊದಲೇ ಭಗ್ನವಾಯಿತು. ಸೋವಿಯೆಟ್ ದಳವು ರುಮೇನಿಯಾ, ಪೋಲೆಂಡ್, ಇಥೋಪಿಯಾ ಮತ್ತು ಕೆಳಗಿನ ಕಾರ್ಪೇಥಿಯನ್ ಪರ್ವತದ ಗಡಿಗಳ ವರೆಗೆ ಪ್ರತಿರೋಧ ಆಕ್ರಮಣವನ್ನು ಸಾಗಿಸಿತು. ಉತ್ತರ ಆಫ್ರಿಕಾದಿಂದ ಜರ್ಮನ್ ಸೈನ್ಯವು ಓಡಿಸಲ್ಪಟ್ಟಿತು. ಟುನಿಶ್ಯಾ ವಿಜಯಾನಂತರ, ಜುಲೈ 10ರಲ್ಲಿ ಮಿತ್ರಸೇನೆಗಳು ಸಿಸಿಲಿಗೆ ಬಂದು, ಇಲ್ಲಿಯ ಯೂರೋಪಿನ ಸಾಮ್ರಾಜ್ಯದಲ್ಲಿ ಮೊತ್ತಮೊದಲಾಗಿ ತಲವೂರಿದವು. ಮುಸಲೋನಿಯವರು ದೇಶಬಿಟ್ಟು ಓಡಿಹೋದರು. ಯುಗೋಸ್ಲೇವಿಯಾ, ಗ್ರೀಸ್, ಫ್ರಾನ್ಸ್ ಮತ್ತು ಇಟಲಿಯಲ್ಲಿ ಮೂರಿಯೂಗಿದ್ದ ಪ್ರಬಲ ಸೇನೆಗಳು ಜರ್ಮನ್ ಸಾಮ್ರಾಜ್ಯದ ಎದುರಾಗಿ ಉಗ್ರ ಕೊದಾಟವನ್ನು ಮಾಡಿದುವು.

೧೯೪೪.

ರೋಮ್ ನಗರವು ಮಿತ್ರರ ಹಸ್ತಗತವಾಯಿತು. ಜೂನ್ 6ರಲ್ಲಿ ಮಿತ್ರಸೇನೆಗಳು ಫ್ರಾನ್ಸಿನಲ್ಲಿ ಇಳಿದವು. ರಷ್ಯನ್ ಸೇನೆಯು ಫಿನ್ನಿಸ್ ರಕ್ಷಣಾವಲಯವನ್ನು ಬೇಧಿಸಿ ಮುನ್ನುಗ್ಗಿತು. ಜಪಾನಿನ ನೌಕಾದಳವು, ಯುದ್ಧದಲ್ಲಿ ಅತ್ಯಧಿಕ ಹಡಗುಗಳನ್ನು ಕಳೆದುಕೊಂಡುದರಿಂದ ಮೊದಲನೆ ಬಾರಿಯಾಗಿ ಜಪಾನು ಯುದ್ಧದಿಂದ ನಿವೃತ್ತಿಸಿ, ಸೋತು ಬೆನ್ನು ಹಾಕಿತು.

'ಪ್ರಭಾತ'

ಪಾಕಿಸ್ತಾನೆಕ್ಕೆ ವಿರೋಧ ಪ್ರಚಾರ.

ಪಾಕಿಸ್ತಾನದ ಬಗ್ಗೆ ಶ್ರೀ ಸಿ. ರಾಜಗೋಪಾಲಾಚಾರಿಯವರ ಸಲಹೆಗಳಿಗೆ ವಿರೋಧವಾಗಿ ಪ್ರಚಾರ ನಡೆಸುವ ಸಲುವಾಗಿ ಪಂಡಿತ ಮದನಮೋಹನ ಮಾಳವೀಯರವರು ಅಖಿಲಭಾರತ ಪ್ರವಾಸವನ್ನು ಸದ್ಯದಲ್ಲಿಯೇ ಕೈಕೊಳ್ಳಲಿರುವರೆಂದೂ ಗೊತ್ತಾಗಿದೆ.

—೦೦—

ಕಸ್ತೂರ್ ಬಾ ನಿಧಿ.

ಪೂಜ್ಯಮಾತೆ ಕಸ್ತೂರ್ ಬಾರವರ ಸ್ಮಾರಕವಾಗಿ ಸಂಗ್ರಹಿಸುತ್ತಿರುವ ಈ ನಿಧಿಯು ಐವತ್ತು ಲಕ್ಷದ ವರೆಗೆ ತಲಪಿದೆ. ನಿಶ್ಚಿತ ಗುರಿಯನ್ನು ತಲಪಲು ಇನ್ನೂ 25 ಲಕ್ಷ ರೂಪಾಯಿಗಳು ವಸೂಲಾಗಬೇಕಿದೆ. ಧನ ಸಂಗ್ರಹಿಸಲು ಇನ್ನು ಕೇವಲ 25 ದಿನಗಳ ಅವಧಿ ಮಾತ್ರ ಉಳಿದಿದೆ. ಈ ಅವಧಿಯಲ್ಲಿ ಮೇಲ್ಕಂಡ 25 ಲಕ್ಷ ರೂಪಾಯಿಗಳ ಸಂಗ್ರಹವಾಗಬೇಕಿದೆ. ಈ ನಿಧಿಯ ಕೇಂದ್ರ ಖಜೇರಿಯವರು ನಿಧಿ ಸಂಗ್ರಹ ಕಾರ್ಯದಲ್ಲಿ ಇನ್ನಷ್ಟು ನಿಷ್ಠೆ ವಹಿಸುವಂತೆ ಮೇಲಿಂದ ಮೇಲೆ ಸೂಚನೆ ಕೊಡುತ್ತಿದ್ದಾರೆ. ಕೊಡಗಿನಲ್ಲಿ ಸಂಗ್ರಹಿಸಬೇಕೆಂದಿದ್ದ ರೂ. 10 ಸಾವಿರದಲ್ಲಿ ಈ ವರೆಗೆ 7,500 ಜಮೆಯಾಗಿದೆ. ಉಳಿದಿರುವ ಈ ಅಲ್ಪ ಅವಧಿಯಲ್ಲಿ ಸಂಗ್ರಹಿಸಲಿರುವ ಬಾಕಿಯನ್ನು ತುಂಬಬೇಕಿದೆ. ಸೆಪ್ಟೆಂಬರ್ ತಾರೀಕು 20 ರೊಳಗೆ ಕೊಡಗಿನ ನಿಧಿ ಸಂಗ್ರಹಣ ಕಾರ್ಯವು ಮುಗಿಯಬೇಕಿದೆ. ಅಂದರೇನೇ ಸರ್ವ ಲೆಕ್ಕ ಪತ್ರಗಳನ್ನು ಸರಿಪಡಿಸಿ ಕೇಂದ್ರ ಖಜೇರಿಗೆ ಸಕಾಲದಲ್ಲಿ ತಲಪಿಸಲು ಸಾಧ್ಯವಾಗುವದು. ಆದ್ದರಿಂದ ಈ ವರೆಗೆ ಈ ನಿಧಿಗೆ ಧನ ಸಹಾಯ ಮಾಡದ ಕೊಡಗು ನಾಡಿನ ಸರ್ವರೂ ತಮ್ಮ ಶಕ್ತ್ಯಾನುಸಾರ ಸಹಾಯ ಮಾಡಬೇಕು. ಮಹಾತ್ಮ ಗಾಂಧಿಯವರ 75ನೇ ಹುಟ್ಟಿದ ಹಬ್ಬವು ಇದೇ ಬರುವ ಅಕ್ಟೋಬರ್ 2ಕ್ಕೆ ಬರುತ್ತದೆ. ಆಗ ಗಾಂಧೀಜಿಯವರಿಗೆ ಈ ನಿಧಿಯನ್ನು ಅರ್ಪಿಸಬೇಕಿದೆ. ಈ ನಿಧಿ ಸಂಗ್ರಹ ಕಾರ್ಯದಲ್ಲಿ ಕೊಡಗು ನಾಡಿನ ವಿದ್ಯಾರ್ಥಿಗಳು, ಸಾರ್ವಜನಿಕ ಮಹನೀಯರೂ ಭಾಗ ವಹಿಸಬೇಕು. ಪ್ರತಿ ಗ್ರಾಮವನ್ನೂ, ಪ್ರತಿ ಮನೆಯನ್ನೂ ಸುತ್ತಿ ಪಾವನ ನೂತೆ ಬಾ ರವರ ನಿಧಿ ಸಂಗ್ರಹ ಕಾರ್ಯಕ್ಕಾಗಿ ಶ್ರಮಿಸಬೇಕು. ಇನ್ನು ಕೇವಲ ಮೂರು ವಾರಗಳು ಮಾತ್ರ ಇವೆ. ಈ ಅವಧಿಯಲ್ಲಿ ಭಾರತೀಯರಾದವರೆಲ್ಲರೂ ಈ ಉದಾತ್ತ ಧ್ಯೇಯಕ್ಕಾಗಿ ಶ್ರಮಿಸಿ ತಮ್ಮ ಕೈಯ್ಯಲ್ಲಾಗುವ ಸಹಾಯ ಮಾಡುವರೆಂದು ನಂಬಲಾಗಿದೆ.

ಕೊ ಡ ಗು

ತಾ. ೧-೯-೧೯೪೪ನೇ ಶುಕ್ರವಾರ

ಕಾಂಗ್ರೆಸಿಗರ ಕರ್ತವ್ಯ.

ಹಿಂದೂದೇಶದ ಯಾಕೆ, ಹಿಂದೂ ರಾಜಕೀಯ ಸಮಸ್ಯೆಯು ವಿಚಾರ ಆಸ್ಥೆಯಿರುವ ಸರ್ವಜನರ ದೃಷ್ಟಿಯು ಗಾಂಧಿ-ಜಿನ್ನಾ ಭೇಟಿಯ ಕಡೆಗೆ ಕೇಂದ್ರೀಕೃತವಾಗಿದೆ. ಆದರೆ ಕಾಂಗ್ರೆಸಿನವರು 1942ನೇ ಆಗಷ್ಟಿನ ಆಂದೋಲನದಿಂದ ಹರಿದು ಹಂಚಲ್ಪಟ್ಟ ಸಂಸ್ಥೆಯ ಪುನರ್ರಚನೆಯನ್ನು ಮಾಡದಿದ್ದರೆ ಮುಂದೆ ಸಂಸ್ಥೆಯು ಶಕ್ತಿಗುಂದಬಹುದು. ಗಾಂಧಿ-ಜಿನ್ನಾರವರ ಮಾತುಕತೆಗಳು ಯಶಸ್ವಿಯಾಗಲೀಯೂ ಮುರಿದುಬೀಳಲಿ, ಪುನರ್ರಚನೆಗೊಂಡ, ಶಕ್ತಿಯುತವಾದ ಕಾಂಗ್ರೆಸ್ ಸಂಸ್ಥೆಯು ದೇಶದ ಪ್ರಧಾನಾವಶ್ಯಕತೆ. ಗಾಂಧಿ-ಜಿನ್ನಾ ಮಾತುಕತೆಗಳು ಯಶಸ್ವಿಯಾದರೆ ಆ ಒಪ್ಪಂದಂತೆ ವರ್ತಿಸುವಂತೆ ಇಡೀ ಹಿಂದೂದೇಶವನ್ನು ಕಾರ್ಯೋನ್ಮುಖರಾಗಿ ಮಾಡಲು ಬಲಯುತವಾದ ಕಾಂಗ್ರೆಸುಬೇಕು. ಈ ಅವಶ್ಯಕತೆಯನ್ನು ಸಾಧಿಸಿ ಬ್ರಿಟಿಷರ ಕೊಂಕಿದ ಕೈಯಿಂದ ಸ್ವಾತಂತ್ರ್ಯವನ್ನು ಕರಗತಮಾಡಿಕೊಳ್ಳಲು ಶಕ್ತಿಯುತವಾದ ಕಾಂಗ್ರೆಸ್ ಸಂಸ್ಥೆ ಬೇಕು. ಕಾಂಗ್ರೆಸಿನ ಮುಂದೆ ಇಂದು ನಾನಾ ರೀತಿಯ ಎಡರುತೊಡರುಗಳಿವೆ. ದೇಶದ ಉದ್ದಗಲಕ್ಕೂ ಹಬ್ಬಿರುವ ಪ್ರಾಂತೀಕ, ಜಿಲ್ಲಾ ಸಮಿತಿಗಳು ನಿಯಮಬಾಹಿರವಾದುವೆಂದು ಸಾರಲ್ಪಟ್ಟಿವೆ. ಮಹಾತ್ಮಗಾಂಧಿಯವರ ಬಿಡುಗಡೆಯಾಗಿ ಮಹಾತ್ಮರು ಸುಸ್ಪಷ್ಟವಾದ ನುಡಿಗಳಿಂದ ಪ್ರಾಯಿದೆಭಂಗ ಚಳವಳದ ಪ್ರಶ್ನೆ ಇಲ್ಲವೆಂದು ಹೇಳಿದ್ದರೂ ದೇಶದಲ್ಲಿ ಸಾರ್ವತ್ರಿಕವಿರುವ ಅರ್ಡಿನೆನ್ಸ್ ರಾಜ್ಯಭಾರವನ್ನು ನಿಲ್ಲಿಸಿರುವದಿಲ್ಲ. ಈ ಸಂದರ್ಭದಲ್ಲಿ ಕಾಂಗ್ರೆಸನ್ನು ಪುನಹ ತನ್ನ ಹಿಂದಿನ ರೂಪಕ್ಕೆ ತರಲು ಏನು ಮಾಡಬೇಕೆಂದು ಪರ್ಯಾಲೋಚಿಸಿದರೆ ಕಾಂಗ್ರೆಸಿನವರು ತಮ್ಮ ದೈನಂದಿನ ಕಾರ್ಯಕ್ರಮಗಳು ಅಂದರೆ ಧ್ವಜಾರೋಹಣ ಮೊದಲಾದುವನ್ನು ಪ್ರಾರಂಭಿಸಬೇಕೆಂದು ಸೂಚಿಸವಾಗಿದೆ. ಯಾಕೆಂದರೆ ಗಾಂಧೀಜಿಯವರು ಹೇಳಿದಂತೆ ಪ್ರಾಯಿದೆಭಂಗದ ಚಳವಳದ ಪ್ರಶ್ನೆ ಈಗ ಇಲ್ಲ. ಮೇಲಿನ ಕಾರ್ಯವನ್ನು ಕಾಂಗ್ರೆಸಿಗರು ಕೈಕೊಳ್ಳುವಾಗ ನಿಯಮಗಳಿಗೆ ವಿರುದ್ಧವಾಗವಂತೆ, ಇಲ್ಲವೇ ಬೇರೆ ಗುಪ್ತಕಾರ್ಯಕ್ರಮಗಳಿಗೆ ಸಹಾಯವಾಗುವಂತೆ ಮಾಡಕೂಡದು. ಸರಕಾರದ ನಿಯಮಗಳನ್ನು ಮುರಿಯದೆ ಕಾಂಗ್ರೆಸಿಗನು ತನ್ನ ಗೌರವ ಮತ್ತು ವ್ಯಕ್ತಿತ್ವಕ್ಕೆ ಕುಂದುಬಾರದ ರೀತಿ ವರ್ತಿಸಬೇಕು.

ಇಡೀ ಕಾಂಗ್ರೆಸ್ಸೇ ಶಾಶ್ವತವಿರುದ್ಧವಾದ ಸಂಸ್ಥೆಯೆಂದು ಸರಕಾರವು ಸಾರಿರುವದಿಲ್ಲ. ಆದ್ದರಿಂದ ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸುವ ಕೆಲಸವು ಎಂದೂ ಸರಕಾರದ ಆಜ್ಞೆಗೆ ವಿರುದ್ಧ ಬರುವಂತಿಲ್ಲ. ಆದಕಾರಣ ದೇಶದ ಉದ್ದಗಲಕ್ಕೂ ಕಾಂಗ್ರೆಸಿಗೆ ಸದಸ್ಯರನ್ನು ಸೇರಿಸುವ ಕೆಲಸವು ನಡೆಯಬೇಕು. ಜಿಲ್ಲಾ ಮತ್ತು ಪ್ರಾಂತೀಕ ಸಮಿತಿಗಳನ್ನು ಸರಕಾರವು ನಿಯಮಕ್ಕೆ ವಿರುದ್ಧವಾದುವೆಂದು ಸಾರಿರುವದರಿಂದ ಕಾಂಗ್ರೆಸ್ ಸದಸ್ಯರಾಗಿ ಸೇರಿದ ಮಹಿಳೆ ಮಹನೀಯರುಗಳು ತಮ್ಮಲ್ಲಿ 'ರೀಜಿನಲ್ ಲೀಡರ್ಸ್' ಯಾ ಪ್ರಥಮ ಸೇವಕರೆಂದು ಕೆಲವರನ್ನು ಚುನಾಯಿಸಿಕೊಂಡು ಅವರ ಸೂಚನೆಯಂತೆ ದೈನಿಕ ಕಾರ್ಯಕ್ರಮಗಳಿಗೆ ತೊಡಗಬೇಕು. ಕೋಮುವಾರು ಐಕ್ಯತೆ, ಅಸ್ಪೃಶ್ಯತಾನಿವಾರಣೆ, ಪಾನನಿರೋಧ, ಖಾದಿ, ಗ್ರಾಮೋದ್ಯೋಗ, ಗ್ರಾಮಪುನರ್ನಿರ್ಮಾಣ, ರಾಷ್ಟ್ರೀಯ ಶಿಕ್ಷಣ, ಫ್ರೌಢರ ಶಿಕ್ಷಣ, ಮಹಿಳೆಯರ ಪುನರೋದ್ಧಾರ, ದಲಿತವರ್ಗದವರ ಸೇವೆ, ಆರೋಗ್ಯ ಮತ್ತು ಶುಚಿತ್ವದ ಶಿಕ್ಷಣ, ರಾಷ್ಟ್ರ ಭಾಷೆಯ ಪ್ರಚಾರ, ಮಾತೃಭಾಷೆಯ ಪ್ರೇಮ, ಮತ್ತು ಆರ್ಥಿಕ ಸಮಾನತೆ, ಕಾಂಗ್ರೆಸಿನ ಈ ಹದಿನಾಲ್ಕು ವಿಧಾಯಕ ಕಾರ್ಯಕ್ರಮಗಳನ್ನು ಅದಮ್ಯ ಮುತುವರ್ಜಿಕೆಯಿಂದ ಮಾಡಬೇಕಿದೆ. ಈ ಕಾರ್ಯಕ್ರಮಗಳೇ ಕಾಂಗ್ರೆಸ್ ಸಂಸ್ಥೆಯ ಆಧಾರಸ್ತಂಭಗಳು. ಈ ಕಾರ್ಯಕ್ರಮಗಳಲ್ಲಿಯೇ ಕಾಂಗ್ರೆಸ್ಸಿನ ಶಕ್ತಿಯಿದೆ, ಭರತಖಂಡದ ಉನ್ನತಿಯಿದೆ. ಭಾರತೀಯರಿಗೆ ಸುಗಮ ಜೀವನ ಮಾರ್ಗವಿದೆ.

ಒಳದೇಶ.

ಕೊಡಗು ನ್ಯಾಯವಿಧಾಯಕ ಸಭೆಯ ವಿಂಟಿಂಗು ತಾ. 9-10-44ರಲ್ಲಿ ನಡೆಯುವದೆಂದು ತಿಳಿಯಬಹುದು.

ಮಡಿಕೇರಿ ವೇದಾಂತ ಮಂದಿರದಲ್ಲಿ ನಾಳೆ ದಿನ ಸಾಯಂಕಾಲ 7 ಗಂಟೆಗೆ ಶ್ರೀ ಎಂ. ಎಸ್. ಅನಂತಪದ್ಮನಾಭರಾಯರಿಂದ ಭಾರತವಾಚನವು ನಡೆಯುವುದು.

ಕೊಡಗಿನ ಚೀಫ್ ಕಮಿಶನರು ರಾಜಧಾನಿಯಲ್ಲಿರುವಾಗ ಮೊದಲೇ ಬರಿದು ಕಾಣಲು ಏರ್ಪಾಡು ಮಾಡದವರು ಆಫೀಸು ದಿನಗಳಲ್ಲಿ ಕೇವಲ 11-30 ಗಂಟೆಯಿಂದ 1-30 ಗಂಟೆಯ ವರೆಗೆ ಮಾತ್ರ ಅವರನ್ನು ಕಾಣಬಹುದೆಂದು ಪ್ರಕಟಿಸಿರುವರು.

ಬೆಂಗಳೂರು ತಾತಾ ವಿಜ್ಞಾನ ಮಂದಿರದಲ್ಲಿರುವ ಶ್ರೀ ಮಲಬಾರ ಮುತ್ತಣ್ಣ ಎಂ. ಎಸ್ಸಿ., ಎ. ಐ. ಐ. ಎಸ್ಸಿ ಇವರನ್ನು ಇಂಗ್ಲೆಂಡ್ ಮತ್ತು ಐಯಲ್ರ್ಲೆಂಡಿನ ಎ. ಆರ್. ಐ. ಸಿ. ಯ 'ಫೆಲೊ' ಆಗಿ ಆರಿಸಿರುವರು.

ನೌಕಾಪಡೆಯಲ್ಲಿದ್ದ ಶ್ರೀ ಕೊಡಂದೇರ ಕರುಂಬಯ್ಯನವರು ತಾರೀಕು 12-8-44ರಲ್ಲಿ ಬೊಂಬಾಯಿಯಲ್ಲಿ ಶಿವಾಧೀನರಾದರೆಂದೂ, ಬೊಂಬಾಯಿಯ ಕೊಡವರೆಲ್ಲರೂ ಸೇರಿ ಅವರ ಶವ ಸಂಸ್ಕಾರವನ್ನು ಮಾಡಿದರೆಂದೂ ತಿಳಿಯಬರುತ್ತದೆ.

ಕಳೆದ ವಾರ ಮಡಿಕೇರಿಯಲ್ಲಿ ಪ್ಲೇಗಿನಿಂದ ಒಬ್ಬನು ಸತ್ತನೆಂದು ಪ್ರಕಟಿಸಿದ ಸುದ್ದಿಯು ತಪ್ಪೆಂದೂ, ಪ್ಲೇಗು ತಗಲಿದವನು ಸತ್ತನೆಂದು ಸಾರಿ ಆತನನ್ನು ಹೂಳುವ ಏರ್ಪಾಡು ಮಾಡುತ್ತಿರುವಾಗ ಆತನು ಜೀವಂತವಾಗಿರುವದು ಕಂಡು ಬಂತೆಂದೂ ಈಗ ವಾಸಿಯಾಗುತ್ತಿರುವನೆಂದೂ ತಿಳಿಯಬಂದಿದೆ. ಡಾಕು ಹಾಕುವ ಕೆಲಸವು ನಡೆಯುತ್ತಿದೆ. ಹೊಸದಾಗಿ ಒಬ್ಬನಿಗೆ ಈ ವಾರ ಪ್ಲೇಗು ತಗಲಿದೆ.

ಕೊಡಗಿನ ವೈದ್ಯಸಾಯ ಇಲಾಖೆಯ ಆಫೀಸರಾದ ಶ್ರೀ ಸುಬ್ರಹ್ಮಣ್ಯಂರವರ ರಾಜಿನಾಮೆಯು ಇಂಡಿಯಾ ಸರಕಾರದವರಿಂದ ಅಂಗೀಕೃತವಾಗಿ ಅವರು ಬರುವ ವಾರಕೆಲಸದಿಂದನಿವೃತ್ತರಾಗುವರೆಂದೂ ಅವರ ಬದಲು ಆ. ಕಮಿಷನರಿಗೆ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ಕಂಡ್ರತಂಡ ಪೊನ್ನಪ್ಪನವರನ್ನು ಈಗಿನ ಹುದ್ದೆಯ ಜೊತೆಗೆ ಎಗ್ರಿಕಲ್ಚರಲ್ ಆಫೀಸರಾಗಿಯೂ, ಶ್ರೀ ಎಂ. ಶ್ರೀನಿವಾಸರಾವ್‌ರನ್ನು ಪೊನ್ನಪ್ಪನವರಿಗೆ ಅಸಿಸ್ಟೆಂಟರಾಗಿ ಚೀಫ್ ಫುಡ್ ಕಂಟ್ರೋಲ್ ಇನ್ಸ್‌ಪೆಕ್ಟರಾಗಿಯೂ, ಶ್ರೀ ಜಿ. ಡಿ. ಪರಮೇಶ್ವರರವರನ್ನು ಮಡಿಕೇರಿ ನಾಡಿನ ಪಾರುಪತ್ಯಗಾರರಾಗಿಯೂ ನೇಮಿಸಲಾಗಿದೆಯೆಂದು ತಿಳಿಯಬರುತ್ತೆ.

—೦೦—

ನಾಲ್ಕು ವರ್ಷದ ಮಗು ಭಗವದ್ಗೀತೆ ಬಾಯಿ ಪಾಠ ಹೇಳುತ್ತಿದೆ.

ಅಮೃತಸರದಲ್ಲಿ 4 ವರ್ಷದ ಹೆಣ್ಣು ಮಗಳೊಬ್ಬಳು ಭಗವದ್ಗೀತೆಯನ್ನು ಸುಸ್ಪಷ್ಟವಾಗಿ ಬಾಯಿಪಾಠ ಹೇಳುತ್ತಾಳೆ. ವೇದ ಮತ್ತು ಉಪನಿಷತ್ತುಗಳನ್ನು ಪಂಡಿತ ವಾಮರರಿಗಿಂತ ಚೆನ್ನಾಗಿ ಓದುತ್ತಿದ್ದಾಳೆ. ಮಗು ಭಾಷೆ ಕಲಿಯುವ ಕಾಲಕ್ಕೇನೇ ಗೀತೆಯನ್ನು ಕಂಠಪಾಠ ಹೇಳಲು ತೊಡಗಿರುವಳಂತೆ. ಪಂಜಾಬದ ಹಲವಾರು ಪಂಡಿತರು ಈ ಮಗುವನ್ನು ಆಹ್ವಾನಿಸಿ ಆದರ ಬಾಯಿಯಿಂದ ಗೀತಾವಾಣಿ ಹೊರಡುವುದನ್ನು ಕೇಳಿ ಆಶ್ಚರ್ಯಪಟ್ಟಿದ್ದಾರೆ.

—೦೦—

ಹುಲಿಯನ್ನು ಬಾಂಬಿಟ್ಟು ಕೊಂದರು.

ಅಸ್ಸಾಮಿನಲ್ಲಿ 18 ಅಡಿ ಉದ್ದದ ದೊಡ್ಡ ಹೆಬ್ಬುಲಿಯೊಂದು ಜನರನ್ನು ಬಹಳವಾಗಿ ಪೀಡಿಸಲಾರಂಭಿಸಿತು. ಅದನ್ನು ಸಾಮಾನ್ಯ ಶಿಕಾರಿ ಕ್ರಮದಲ್ಲಿ ಕೊಲ್ಲಲಾಗದೆ ಕೊನೆಗೆ ಸೈನಿಕರ ನೆರವು ಪಡೆದು ಬಾಂಬಿಟ್ಟು ಕೊಲ್ಲಬೇಕಾಯಿತು. ಸತ್ತ ಹೆಂದಿಯು ಮಾಂಸದಲ್ಲಿ ಒಂದು ಬಾಂಬನ್ನು ಅಡಗಿಸಿಟ್ಟು, ಅದನಕ್ಕೆ ತಿನ್ನಲು ಹುಲಿ ಬಂದು ಬಾಯಿಹಾಕುವಾಗ ಬಾಂಬು ಸಿಡಿಯುವಂತೆ ಏರ್ಪಡಿಸಿದ್ದರು.

—೦೦—

ಸಾವ್ಮೆಲ್ ಹೋರರು ವೈಸರಾಯರು?

ವೇವೆಲ್ಲರಿಗೆ ಹೊಸ ಹುದ್ದೆ.

ಚರ್ಚಿಲರು ಹಿಂದೂಸ್ಥಾನಕ್ಕೆ ಸರ್. ಸಾವ್ಮೆಲ್ ಹೋರರನ್ನು ವೈಸರಾಯರನ್ನಾಗಿ ನೂಡಿ ಕಳುಹಿಸಲಿರುವರು. ಲಾರ್ಡ್ ವೇವೆಲ್ಲರು ಯುದ್ಧ ಮಂತ್ರಿ ಮಂಡಳದಲ್ಲಿ ಸೇರಬೇಕಾಗುವುದು ಎಂಬ ಸುದ್ದಿ ನಿರಾಧಾರವಾದುದೆಂದು ರಾಜಕೀಯ ಸುದ್ದಿಗಾರನು ಅಧಿಕಾರ ವರ್ಗದ ಕೂಡೆ ತರ್ಕಿಸಿರುವನು.

ವಾರ್ತೆಗಳು.

ಗಾಂಧಿ-ಜಿನ್ನಾ ವಿಂಟಿಂಗು ತಾ. 7-9-44 ರಲ್ಲಿ ನಡೆಯುವದೆಂದು ಪ್ರಕಟವಾಗಿದೆ.

ವೈಸರಾಯರೊಡನೆ ಭಾರತ ಸ್ವಾಮಸ್ಯೆಯ ವಿಚಾರ ಚರ್ಚಿಸಲು ಹತ್ತೊಂಭತ್ತು ಪ್ರಾಂತಗಳ ಗವರ್ನರುಗಳು ದೆಲ್ಲಿಗೆ ಹೋಗಿರುವರು.

—೦೦—

ಕಸ್ತೂರಿ ಬಾ ಸ್ಮಾರಕ ನಿಧಿ.

ಶ್ರೀ ಮುಕ್ಕಿಯಪಂಡ ಎನ್. ಚಟ್ಟಪ್ಪನವರು		100
,, ಅಜ್ಜಿಕುಟ್ಟಿರ ಎಸ್. ಪೊನ್ನಪ್ಪ	,,	50
,, ಪುಟ್ಟಚಂಡ ಕುಟುಂಬಸ್ಥರು		50
,, ಹೆಚ್. ಬಿ. ಬೋರಯ್ಯ	,,	50
ಮಿಸೆಸ್ ಚೆಪ್ಪುಡಿರ ಬಿ. ಮೂದಯ್ಯ	,,	50
ಶ್ರೀಮಾನ್ & ಶ್ರೀಮತಿ ಎಂ. ಸುಬ್ರಾಯ	,,	50
ಶ್ರೀ ಬಲ್ಲಚಂಡ ಎನ್. ಸುಬ್ಬಯ್ಯ	,,	25
,, ಮನೆಯಪಂಡ ನಾಚಯ್ಯ	,,	10
,, ಹಿತಚಿಂತಕರು	,,	10
,, ಪಿ. ಎಂ. ಅಚ್ಯುತಪ್	,,	5
,, ಪಿ. ಕೆ. ಪೂವಯ್ಯ	,,	5

2 ರೂ. ಕೊಟ್ಟವರು.

ಶ್ರೀ ಗಳಾದ ಸಿ. ಎಸ್. ದೇವಯ್ಯ, ಬಿ. ಎಂ. ಆನಂದನ್, ಪಿ. ಕಣ್ಣನ್, ಎ. ಡಿ. ಜೋಷಿ, ಮುಂಡೆಜಾಡಿರ ಎಂ. ಸುಬ್ಬಮ್ಮ ಇವರುಗಳು.

1 ರೂ. ಕೊಟ್ಟವರು.

ಶ್ರೀ ಗಳಾದ ಅಚ್ಚಣ್ಣ ಶೆಟ್ಟ, ಎಂ. ಎಂ. ಅಪ್ಪಯ್ಯ, ಗಂಗಾಧರ, ಎಂ. ಎನ್. ರಾಮಯ್ಯ, ಮುಂಡಪ್ಪ, ರಾಘವಾಚಾರಿ, ಸಿ. ಗಣೇಶರಾವ್, ಬೇಸ್ಟಿಯನ್ ಫ್ರೇನ್ಸಿಸ್, ಬಿಕ್ಕಲಿಗರ ತಿಮ್ಮಯ್ಯ, ಅಜ್ಜಿನಿಕಂಡಚಿಣ್ಣಪ್ಪ, ಪಿ ಮೂಯಿನೆ, ಸಿ. ಎಫ್. ಬರ್ನಾರ್ಡ್, ಎಂ. ಎಸ್. ಐಯ್ಯಣ್ಣ, ಕೆಂಜಂಗಳ ಎ. ಚಂಗಪ್ಪ, ನಾಯಕಂಡ ಅಪ್ಪಚ್ಚ, ವಿ. ತಮ್ಮಯ್ಯ, ಎಂ. ಎಂ. ಸಿದ್ದೀಕ್ ಮತ್ತು ಶ್ರೀಮತಿ ಅಮ್ಮಣಿಚಂಡ ಸಿ. ಬೊಳ್ಳವ್ವ—ಇವರುಗಳು.

ಈ ವರೆಗೆ ಒಟ್ಟು ರೂ. 7,667 ಜಮೆಯಾಗಿದೆ.

ರಣಭೇರಿ.

ಈ ವಾರದ ಪ್ರಮುಖ ವರ್ತಮಾನವೆಂದರೆ ಜಗತ್ತಿಗೆ ಹೆಸರಾದ, ಸುಂದರ ನಗರ ಪ್ಯಾರಿಸ್ಸನ್ನು ಜರ್ಮನರ ಕೈಬಿಟ್ಟದ್ದು. 1940 ನೇ ಇಸವಿಯಲ್ಲಿ ಜರ್ಮನರು ಈ ನಗರವನ್ನು ವಶಪಡಿಸಿಕೊಂಡಿದ್ದರು. ಈ ನಾಲ್ಕು ವರ್ಷಗಳ ವರೆಗೆ ಪ್ಯಾರಿಸು ನಾಲ್ಕಿಂಗಳ ಪ್ರಭಾವಕ್ಕೊಳಗಾಗಿತ್ತು. ಆ ನಗರವು ಇಂದು ಪುನಹ ಫ್ರೆಂಚರ ವಶವಾಗಿ ಸ್ವತಂತ್ರವಾಗಿದೆ. 1940 ನೇ ಜೂನ್ 14 ನೇ ದಿನ ಪ್ಯಾರಿಸು ಜರ್ಮನರ ವಶವಾಯಿತು. ಅಂದಿನಿಂದ ಇಂದಿನ ವರೆಗೆ ಸ್ವತಂತ್ರ ಫ್ರೆಂಚರು ಆಹೋರಾತ್ರೆ ಜರ್ಮನರೊಡನೆ ಹೆಣಗಾಡಿದ್ದರೆ. ತಮ್ಮ ಉಜ್ವಲವಾದ ದೇಶಭಕ್ತಿಗಾಗಿ ಪ್ರಾಣವನ್ನೇ ತೆತ್ತಿದ್ದಾರೆ. ಇಂದು ಪ್ಯಾರಿಸು ಸ್ವತಂತ್ರವಾಗಿದ್ದರೆ ಪ್ರಾಮುಖ್ಯವಾಗಿ ಮಿಲಿಟರಿ ಶಕ್ತಿಯಿಂದಲ್ಲ; ಅಲ್ಲಿಯ ನಾಗರೀಕರ ಅಸಹಕಾರದ ಕಾರಣದಿಂದ. ಪ್ಯಾರಿಸಿನಲ್ಲಿ ನಿಜವಾದ ಫ್ರೆಂಚನೊಬ್ಬನೂ ಜರ್ಮನ್ ಆಡಳಿತಕ್ಕೆ ಮಣಿದಿರಲಿಲ್ಲ. ಜರ್ಮನ್ನನೊಬ್ಬನು ಬಂದು ಬಸ್ಸು ಹತ್ತಿದರೆ, ಬಸ್ಸಿನಲ್ಲಿದ್ದ ಫ್ರೆಂಚನು ಇಳಿದು ಬೇರೆ ಬಸ್ಸಿನಲ್ಲಿ ಹೋಗುತ್ತಿದ್ದ. ಸಿನೆಮಾಗೃಹಕ್ಕೆ ಜರ್ಮನನು ಬಂದರೆ ಫ್ರೆಂಚನು ಹೊರಗೆ ನಡೆಯುತ್ತಿದ್ದ. ಜರ್ಮನಿನು ನಾಲ್ಕಿಂಗಳಿಗೆ ಶಿರಬಾಗಿಯಾವ ರೀತಿಯ ಕಾರ್ಯವನ್ನು ಮಾಡುತ್ತಿರಲಿಲ್ಲ ಇದು ಪ್ಯಾರಿಸ್ಸಿಂದರಲ್ಲಿ ಅಲ್ಲ; ಇಡೀ ಫ್ರಾನ್ಸಿನ ಕಥೆಯಿದು. ಜರ್ಮನರು ತಮ್ಮ ಪಾಶವೀ ನೀತಿಯಿಂದ ಫ್ರೆಂಚರನ್ನು ಹಿಂಸಿಸಿದ್ದಾರೆ. ಆದರೂ ಫ್ರೆಂಚರ ರಾಷ್ಟ್ರ ಪ್ರೇಮವು ಕಡಿಮೆಯಾಗಲಿಲ್ಲ. ಪ್ರತಿಯೊಂದು ಕ್ಷೇತ್ರದಲ್ಲೂ ಜರ್ಮನರೊಡನೆ ಅಸಹಕರಿಸಿದರು. ಯಾವನೊಬ್ಬ ಜರ್ಮನನ ಪ್ರಾಣವೂ ಫ್ರಾನ್ಸಿನಲ್ಲಿ ಸುರಕ್ಷಿತವಿರಲಿಲ್ಲ. ಈ ರೀತಿಯ ಅಖಂಡ ಅಸಹಕಾರದ ಫಲಿತಾಂಶವಾಗಿ ಆದೋ ಪ್ಯಾರಿಸು ಸ್ವತಂತ್ರವಾಯಿತು. ಶೀಘ್ರವಾಗಿ ಫ್ರಾನ್ಸೂ ಸ್ವತಂತ್ರವಾಗಬಹುದು. ಪ್ಯಾರಿಸಿನ ಜಯವನ್ನಲ್ಲಿ ಅಲಂಕರಿಸಬೇಕಾದುದು ಕೇವಲ ಸೈನಿಲಿಟರಿಯವರ ಕೊರಳನ್ನಲ್ಲ. ಅಲ್ಲಿಯ ಕೆಲಸಗಾರರು, ಗುಮಾಸ್ತರು, ಸಾರ್ವಜನಿಕರು ಇವರ ಕೊರಳನ್ನು! ಯೂಪ ದೇಶಕ್ಕೂ ಮಾರ್ಗದರ್ಶಕವಾಗುವಂತೆ ಅಸಹಕಾರ ಕಾರ್ಯಕ್ರಮವನ್ನು ಇವರು ಆಚರಿಸಿದ್ದಾರೆ. ಪರಕೀಯರ ಆಡಳಿತದಲ್ಲಿರುವ ರಾಷ್ಟ್ರಗಳು ಈ ಪಾಠವನ್ನು ಅವಶ್ಯಕಲಿಯಬೇಕು. ಫ್ರಾನ್ಸಿನಲ್ಲಿ ಸ್ವತಂತ್ರರು ವಿಜಯಗಳಾಗರು. ಪಿಟೈನ್, ಲಾವಲ್ ರಂಥಾವರತಿಯೇನಾಯಿತೆಂದು ವಿಚಾರಿಸಿದರೆ ಅವರೆಲ್ಲರೂ ಜರ್ಮನರೊಡನೆಯೇ ಉಂಟುಮೂಟೆ ಕಟ್ಟಿ ಪ್ಯಾರಿಸ್ಸಿನಿಂದ ಹೋದರು. ಲಾವಲ್, ಪಿಟೈನರನ್ನು ಜರ್ಮನರು ಇತ್ಕಲಾಗಿ ದಸ್ತಗಿರಿ ಮಾಡಿರುವರು. ಪ್ಯಾರಿಸಿನಂತೆಯೇ ಇಡೀ ಫ್ರಾನ್ಸ್ ಬಿಡುಗಡೆಗೊಳ್ಳಬಹುದು. ಸ್ವತಂತ್ರ ಫ್ರೆಂಚ್ ಪಕ್ಷದ ಡಿಗಾಲೆಯವರು ಫ್ರಾನ್ಸಿನ ದಳದ ಮುಖ್ಯ ಸೇನಾನಿಯೆಂಗಿ ಆರಿಸಲ್ಪಟ್ಟಿದ್ದಾರೆ. ಜನರಲ್ ಕೊಯಿನಿಗ್ ಎಂಬ ಫ್ರೆಂಚ್ ನುಖಂಡರು ಪ್ಯಾರಿಸ್ ನಗರದ ಗವರ್ನರರಾಗಿ ನೇಮಕಹೊಂದಿದ್ದಾರೆ.

ಪ್ಯಾರಿಸನ್ನು ವಶಪಡಿಸಿಕೊಂಡ ಮಿತ್ರರಕ್ಷ ಬಹು ವೇಗದಿಂದ ಮುಂದರಿಯುತ್ತಿದ್ದಾರೆ. ನಾರ್ಮಂಡಿ ಕದನದರಲ್ಲಿ ಜರ್ಮನರಿಗೆ ಬಹು ದೊಡ್ಡ ನಷ್ಟವಾಗಿದೆ. ಸತ್ತವರು, ಘಾಯಗೊಂಡವರು, ಕೈದಿಗಳು ಎಲ್ಲರೂ 300,000 ಜರ್ಮನರಿರಬಹುದೆಂದು ಅಂದಾಜುಮಾಡಲಾಗಿದೆ. ದಕ್ಷಿಣದಲ್ಲಿ ಹೊಸ ಧಾಳಿ ಪ್ರಾರಂಭಿಸಿದ ಜನರಲ್ ವಿಲ್ಸನವರು ಸುಮಾರು 6000 ಚದರ ಮೈಲುಗಳಷ್ಟು ಪ್ರದೇಶವನ್ನು ಆಕ್ರಮಿಸಿ, 30,000 ಜನರನ್ನು ಕೈದಿಗಳನ್ನಾಗಿ ರೆಹಿಡಿದಿರುವರಂತೆ. ಇಕ್ಕಡೆಯಿಂದಲೂ ಮಿತ್ರರು ಮುಂದೆ ಸಾಗುತ್ತಿದ್ದರೂ ಇವೆರಡು ಹಿಂದನ್ನೊಂದು ಸೇರಿ ಜರ್ಮನರನ್ನು ಪೂರ್ಣವಾಗಿ ಫ್ರಾನ್ಸಿನಿಂದ ಅಟ್ಟಲು ಇನ್ನೂ ಸ್ವಲ್ಪ ದಿನಗಳು ಹಿಡಿಯಬಹುದು. ಫ್ರಾನ್ಸ್ ರಣಕ್ಷೇತ್ರದಲ್ಲಿ ಜರ್ಮನರು ಈಗೀಗ ಹೆಚ್ಚಿನ ಪ್ರತಿಭಟನೆ ಮಾಡುತ್ತಿಲ್ಲವೆಂದೂ, ಜರ್ಮನರ ವಿಮಾನಗಳೇ ಕಂಡುಬರುವದಿಲ್ಲವೆಂದೂ ವರದಿಗಳು ತಿಳಿಸುತ್ತವೆ ಜರ್ಮನರು ಈ ರೀತಿ ಹಿಂತೆಗೆದುಕೊಳ್ಳುತ್ತಿರುವದೇಕೆಂದು ಸರ್ವರೂ ಆಶ್ಚರ್ಯಗೊಂಡು ಪ್ರಶ್ನಿಸುತ್ತಿರಿ. ಸದ್ಯಬರೆಯುತ್ತಿರುವ ವರದಿಗಳನ್ನು ನಂಬುವದಾದರೆ ಜರ್ಮನರ ಶಕ್ತಿಯು ಕುಂದುತ್ತಿರುವದರಿಂದ ಜರ್ಮನಿಯನ್ನು ರಕ್ಷಿಸಿಕೊಳ್ಳಲು ಅವರು ಹಿಂತೆಗೆದುಕೊಂಡು ಸಿದ್ಧತೆ ಮಾಡುತ್ತಿರಬಹುದೆಂದು ಹೇಳಬಹುದು. ಜರ್ಮನರು ತಮ್ಮ ಪ್ರೇತವಿಮಾನಗಳ ಹಾವಳಿಯನ್ನು ಹೆಚ್ಚಿಸುತ್ತಿರುವದನ್ನು ನೋಡಿದರೆ– ಫ್ರಾನ್ಸಿನಲ್ಲಿರುವ ಮಿತ್ರರಿಗೆ ಯೂಪ ಕಡೆಯಿಂದಲೂ ಸಹಾಯ, ಆಹಾರ ಪದಾರ್ಥಗಳು ಬರದಂತೆ ಸುತ್ತುಮುತ್ತಲಿನ ರಾಷ್ಟ್ರಗಳನ್ನು ಹುಡಿಮಾಡುವ ಇಚ್ಛೆಯೂ ಅವರಿಗಿರುವಂತೆ ಕಂಡುಬರುವದು. ಹೇಗೂ ಹಿಟ್ಲರನ ಸ್ಥಿತಿ ದಿನದಿಂದ ದಿನಕ್ಕೆ ಸುಧಾರಿಸುವಂತೆ ಕಂಡುಬರುವದಲ್ಲ

ಅತ್ತ ರಷ್ಯನರ ಮುನ್ನಡೆ ಜೋರಾಗಿ ನಡೆದಿದೆ. ರೊಮೇನಿಯೂವು ಜರ್ಮನರ ಸಂಗವನ್ನು ತ್ಯಜಿಸಿದೆ. ಈ ಮಧ್ಯೆ ಜಪಾನ್ ಜರ್ಮನಿ ರಾಯಭಾರಿಗಳ ಭೇಟಿಯೊಂದು ಆಗಿದೆ. ಯಾವ ವಿಷಯ ಚರ್ಚೆಯಾಯಿತೆಂದು ತಿಳಿದುಬಂದಿರುವದಿಲ್ಲ. ರಷ್ಯನರು ಟ್ಯೂನಾಸಿಲ್ವೇನಿಯಾಕ್ಕೆ ನುಗ್ಗಿದ್ದಾರೆ. ಫಿನ್ಲೆಂಡ್ ಗಡಿಯಲ್ಲಿ ರಷ್ಯನರ ಹೊಸ ಧಾಳಿ ಪ್ರಾರಂಭವಾಗಿದೆ. ಬಲ್ಗೇರಿಯಾದಿಂದ ಜರ್ಮನರು ಹಿಂತೆಗೆದುಕೊಳ್ಳುವರೆಂದೂ ಬಲ್ಗೇರಿಯಾವು ರೊಮೇನಿಯಾದಂತೆಯೇ ಮಿತ್ರಕಿಬಿರಕ್ಕೆ ಸೇರಬಹುದೆಂದೂ ವಾರ್ತೆಯಿದೆ. ಪೂರ್ವರಣರಂಗದಲ್ಲಿ ಹೆಚ್ಚಿನ ವಾರ್ತೆಗಳಿಲ್ಲ. ಜಪಾನರು ಚೈನಾ ಯುದ್ಧದ ಬಗ್ಗೆ ಹೆಚ್ಚು ಆಸಕ್ತಿವಹಿಸಿದಂತೆ ಕಂಡುಬರುತ್ತದೆ. ಹಿಂದೂಸ್ಥಾನಕ್ಕೆ ಅವರ ಗಂಡಾಂತರವು ತತ್ಕಾಲಕ್ಕೆ ಇಲ್ಲದಿದ್ದರೂ ಅವರು ಮತ್ತೊಮ್ಮೆ ಹಿಂದೂದೇಶದ ಮೇಲೆ ನುಗ್ಗುವ ಪ್ರಯತ್ನ ಮಾಡದಿರರೆಂದು ಹೇಳಲಾಗುತ್ತಿದೆ.

'ಯುದ್ಧ ಅಕ್ಟೋಬರ ತಿಳಿಯಲ್ಲಿ ಅಂತ್ಯ.'

ಇವನೊಬ್ಬ ವಿಚಿತ್ರ ಪುರುಷ! ಸಾಮಾನ್ಯ ಉಡುಪಿನ ಲಾಮೂ.

ಕಲ್ಕತ್ತೆಯಲ್ಲಿ ಇವನೊಂದು ಟ್ರಾಮ್ಕಾರನ್ನೇರ ಒಬ್ಬ ಮಹಿಳೆಯು ಬಳಿ ಕುಳಿತ. 'ಆದೇಕೆ ಹಾಗೆ ಮಾಡುತ್ತಿರುವೆ? ಆದು ನ್ಯಾಯವಲ್ಲ; ಮಹಿಳೆಯು ಬಳಿ ಕುಳ್ಳಿರುವುದೆಂದು' ಒಬ್ಬ ಪ್ರಯಾಣಿಕ ಆಕ್ಷೇಪಿಸಲು ಆ ಲಾಮು 'ನಿನ್ನೆ ನಿನ್ನ ಮಗ ಮೃತಪಡಲಿಲ್ಲವೇ?' ಎಂದು ಕೇಳಿದ. ಆತನೂ ಹೌದೆಂದು ಒಪ್ಪಿದ. ಜನರಿಗೆ ಆಶ್ಚರ್ಯವಾಯಿತು.

ಅಷ್ಟರಲ್ಲಿ ಕಂಡಕ್ಟರ್ ಬಂದು; ಟಿಕೆಟಿನ ದುಡ್ಡಿಗೆ. ಲಾಮೂ ತನ್ನ ಪುತ್ತು ಆ ಮಹಿಳೆಯರಿಬ್ಬರಿಗೋಸ್ಕರವೂ ಟಿಕೆಟಿನ ಹಣ ಕೊಟ್ಟ. ಆ ಮಹಿಳೆ ಈ ಬಾರಿ ಆಕ್ಷೇಪಿಸಿದಳು. ಆದರೆ ಲಾಮು 'ನೀನು ದುಡ್ಡು ಕೊಡಲಿಕ್ಕೆ ನಿನ್ನಲ್ಲಿ ಹಣದ ಚೀಲವಿಲ್ಲ!' ಎಂದ. ಮಹಿಳೆ ಗಾಬರಿಯಾಗಿ ತನ್ನ ಹಣದ ಚೀಲ ಹುಡುಕಿದಳು—ಇಲ್ಲ!

ಇದರಿಂದ ಆಶ್ಚರ್ಯಗೊಂಡ ಪ್ರಯಾಣಿಕರು ಹಲವು ಪ್ರಶ್ನೆಗಳನ್ನು ಲಾಮನೊಡನೆ ಕೇಳಲಾರಂಭಿಸಿದರು. ಲಾಮನು ತಾನೊಂದೇ ಪ್ರಶ್ನೆಗೆ ಉತ್ತರ ಕೊಡುವೆನೆಂದು. ಆಗ ಈ ಪ್ರಶ್ನೆ ಬಂತು–'ಯುದ್ಧ ಯಾವಾಗ ಮುಗಿಯುತ್ತದೆ?' ಉತ್ತರ:–'ಇದೇ ಇಸ್ವಿ ಅಕ್ಟೋಬರ ತಾ. ತಿಳಿಯಲ್ಲಿ!'

—೦೦—

ಪಾಕಿಸ್ಥಾನದ ಸಮಸ್ಯೆ.

ಪಾಕಿಸ್ಥಾನ ಸಮಸ್ಯೆ ತೀರ್ಮಾನಿಸಲು ಒಂದು ಅಂತರರಾಷ್ಟ್ರೀಯ ಪಂಚಾಯಿತಿಯನ್ನು ನೇಮಿಸಬೇಕೆಂದೂ ಆದರ ತೀರ್ಮಾನವನ್ನು ಕಾವ್ಗ್ರೆಸು ಅಂಗೀಕರಿಸುವುದಾಗಿಯೂ ರೈ|| ಆ|| ವಿ. ಎಸ್. ಶ್ರೀನಿವಾಸಶಾಸ್ತ್ರಿಯವರು ತಾ 24 ರ ಸಂಜೆ ತಿಳಿಸಿದರು.

ಈ ಪಂಚಾಯಿತಿಗೆ ಜನರಲ್ಸಿಸ್ಮೋ ಚಿಯಾಂಗ್ ಕೈಷಕ್ ರ ಪ್ರತಿನಿಧಿಯೂ, ಫ್ರೆಂಚ್ ಪ್ರತಿನಿಧಿಯೊಬ್ಬರೂ ಮತ್ತು ಅಧ್ಯಕ್ಷ ರೂಸ್‌ವೆಲ್ಟರಿಂದ ನೇಮಿತರಾದ ಅಮೇರಿಕಾದ ಸುಪ್ರೀಂ ಕೋರ್ಟಿನ ಒಬ್ಬ ಜಡ್ಜರೂ ಇರಬೇಕೆಂದೂ ಆ ಅಮೇರಿಕನ್ ಜಡ್ಜರೇ ಸಮಿತಿಗೆ ಅಧ್ಯಕ್ಷರಾಗಿರಬೇಕೆಂದೂ ಶ್ರೀ ಶಾಸ್ತ್ರಿಯವರು ತಿಳಿಸಿದರು.

'ಆತ್ಮ ನಿರ್ಣಯದ ಹಕ್ಕಿನ ತತ್ವದಿಂದ ಬಹು ಅನರ್ಥವುಂಟಾಗಿದೆ. ಸರ್ ಕ್ರಿಪ್ಸ್‌ರವರ ಸಲಹೆಗಳಲ್ಲಿ ಈ ತತ್ವವನ್ನು ಮಾತ್ರ ಬಿಟ್ಟು ಗಾಂಧೀಜಿಯವರು ಬಾಕಿ ಎಲ್ಲವನ್ನೂ ಒಪ್ಪಬೇಕು. ಇದರಿಂದ ಭಾರತಕ್ಕೆ ಸ್ವಾತಂತ್ರ್ಯದ ಕದಗಳು ದೊರೆಯುತ್ತದೆ' ಎಂದು ಶ್ರೀ ಶಾಸ್ತ್ರಿಯವರು ತಿಳಿಸಿದರು.

—೦೦—

ಕೆತ್ತಾಟಕ್ಕೆ ಆರಂಭ.

ಸಂಗ್ರಾಮದ ಅಂತ್ಯ ಹತ್ತಿರವಾದಂತೆಲ್ಲಾ ಒಳಗೆ ಅಳವಾಗಿ ಅಡಗಿ ಕೂತಿದ್ದ ಭಿನ್ನಾಭಿಪ್ರಾಯಗಳು ಮೆಲ್ಲಗೆ ತಲೆಯೆತ್ತುತ್ತಿವೆ. ಪೋಲೆಂಡ್ ವಿಚಾರವಾಗಿ ರಷ್ಯಕ್ಕೂ, ಬ್ರಿಟನಿಗೂ ಉಗ್ರಭಿನ್ನಾಭಿಪ್ರಾಯವುಂಟಾಗಿದೆ.

ಪಶ್ಚಿಮ ಇಂಡೀಸ್‌ನಲ್ಲಿರುವ ಬರ್ಮುಡಾ ಮತ್ತು ಇತರ ದ್ವೀಪಗಳನ್ನೆಲ್ಲಾ ತಮಗೆ ಬಿಟ್ಟುಕೊಡಲು ಅಮೆರಿಕನರು ಬ್ರಿಟನನ್ನು ಕೇಳಲು ಆರಂಭಿಸಿದ್ದಾರೆ. ಪಶ್ಚಿಮಾರ್ಧಗೋಳದ ರಕ್ಷಣೆಗೆ ಅವು ಅತ್ಯಗತ್ಯವೆಂದವರು ವಾದಿಸುತ್ತಿದ್ದಾರೆ. ಇದಲ್ಲದೆ ಕದನದಲ್ಲಿ ಜಯ ಪಡೆಯಲು ಬ್ರಿಟನಿಗಿಂತ ತಾನು ಹೆಚ್ಚು ದುಡಿದಿರುವುದಾಗಿ ಅಮೇರಿಕ ಹೇಳುತ್ತಿದೆ.

—೦೦—

ನಂಬಿಕೆಗರ್ಹವಾದ ಸಂಖ್ಯೆಗಳು.

23ನೇ ತ್ರೈವಾರ್ಷಿಕ ಮೌಲ್ಯಗಣನೆ.

ಮೂರು ವರ್ಷಗಳ ಏನ್ ಲಾಭ 1,50,88,092.

ವಿಮಾದಾರರ ಕ್ಷೇಮನಿಧಿ 54 ಲಕ್ಷ ಸೇರಿಸಿದೆ.

ಬೋನಸುಗಳು ಹೋಲ್ ಲೈಫ್ 1000ಕ್ಕೆ ವರ್ಷಕ್ಕೆ 12½%

ಎಂಡೋಮೆಂಟ್ .... 1000ಕ್ಕೆ ವರ್ಷಕ್ಕೆ 10½%

'ಓರಿಯಂಟಲ್'

ಗವರ್ನ್‌ಮೆಂಟ್ ಸೆಕ್ಯೂರಿಟಿ ಲೈಫ್ ಅಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಸ್ಥಾಪನೆ ಭಾರತದಲ್ಲಿ 1874] [ಮುಖ್ಯ ಖಜೇರಿ–ಬೊಂಬಾಯಿ.

ಶಾಖೆ–'ಓರಿಯಂಟಲ್ ಬಿಲ್ಡಿಂಗ್ಸ್' ಸೌತ್ ಪೇರೇಡ್, ಬೆಂಗಳೂರು.

ಇನ್ಸ್‌ಪೆಕ್ಟರರ ಆಫೀಸು—ಕೆ. ಸದಾಶಿವ ರೋಡು, ಮಂಗಳೂರು.

ಬಾತ್ಮಿ.

ವಿದ್ಯಾ ಇಲಾಖೆ.

ಕೊಪಗಿನ ವಿದ್ಯಾ ಇಲಾಖೆಯ ವಿಚಾರದ ವರ್ತಮಾನಗಳು ಆಗಾಗ್ಗೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಮಡಿಕೇರಿ ಬೋರ್ಡಿಂಗ್ ಮನೆಯ ಅವ್ಯವಸ್ಥೆ, ಅಧ್ಯಾಪಕರ ತರಬೇತು ಶಾಲೆಯ ಬಂಡಾಟ, ಕೊಡಗಿನ ವ್ಯಾಪ್ತಿಯಲ್ಲಿ ವಿದ್ಯಾಪ್ರಚಾರದ ಪೂರ್ಣ ಜವಾಬ್ದಾರಿಯನ್ನು ಹೊತ್ತ ಜಿಲ್ಲಾ ಬೋರ್ಡು ಅಧ್ಯಾಪಕರ ತೊಂದರೆ ಹೀಗೆ ಹಲವಾರು ವಿಚಾರಗಳಲ್ಲಿ ಕೂಗು ಕೇಳಿಬರುತ್ತಿವೆ. ಅದರೊಂದಿಗೆ ಶಾಲಾ ಅಧ್ಯಾಪಕರು ಹೆಚ್ಚು ಹೆಚ್ಚಾಗಿ ಸೈನ್ಯಕ್ಕೆ ಸೇರಿದ ಮತ್ತು ಸೇರುತ್ತಿರುವ, ಕಾರಣ ಪಾಠ ಮಾಡಲು ಅಧ್ಯಾಪಕರಿಲ್ಲದೆ ಹಳ್ಳಿಯ ಶಾಲೆಗಳೆಲ್ಲಾ ಕಷ್ಟಪಡುತ್ತಿರುವ, ಅಧ್ಯಾಪಕರು ಸಿಕ್ಕಿದರೂ, ಅವರಿಂದ ಪಾಠ ಹೇಳಿಸಿಕೊಂಡರೂ ತಲೆಗೆ ಹಿಡಿಯದೆ ಮಕ್ಕಳು ಪಡುತ್ತಿರುವ ಕಷ್ಟದ ಕೂಗು ಕೇಳಿಬರುತ್ತಿದೆ. ಆದರೊಂದಿಗೆ ಚಿತ್ರವಿಕಾರ ಹೊಂದಿದ ವರ್ಗಾವರ್ಗಿ! ಕೊಡಗಿನ ವಿದ್ಯಾ ಇಲಾಖೆಗೆ ಇದೊಂದು ದುರಂತ ಸಹಯವೆಂದರೂ ಸರಿಯೆ! ಇಷ್ಟೆಲ್ಲಾ ಕೂಗು, ಪ್ರಕಟಣೆಗಳಾದರೂ ಫಲತಾಂಶವೇನು? ಮಡಿಕೇರಿ ಹೈಸ್ಕೂಲಿನ ವಿದ್ಯಾರ್ಥಿಗಳ ತೊಂದರೆಯು ನೀಗಲಿಲ್ಲ. ಯಥಾವಿಧಿ ವೆರಾಂಡದಲ್ಲಿ ಬಿದಿರು ತಟ್ಟಿ ಕಟ್ಟಿಕೊಂಡು ಮಲಗುವದು ನಿಲ್ಲಲಿಲ್ಲ. ಬೋರ್ಡಿಂಗಿನ ತೊಂದರೆಯು ಅಷ್ಟಾದರೂ ತಪ್ಪಲೇ ಎಂಬಂತೆ ನಾಟಕಲಸದ ರಜೆ ಕಳೆದು ವಾರವಾದರೂ ಬೋರ್ಡಿಂಗ್ ವಿದ್ಯಾರ್ಥಿಗಳು ಸರಿಯಾಗಿ ಇನ್ನೂ ಬಂದಿಲ್ಲ! ಜನತೆಯ ಕೂಗಿಗೆ ಕಿವಿಗೊಟ್ಟು ಉಚ್ಚ ಅಧಿಕಾರಿಗಳು ಒಂದಲ್ಲ ಎರಡು ಬಾರಿ ಬೋರ್ಡಿಂಗ್ ಮನೆಯನ್ನು ಸಂದರ್ಶಿಸಿ ನೋಡಿದರು. ಅಧಿಕಾರಿಗಳಿಗೆ ಬೋರ್ಡಿಂಗ್ ಮನೆಯು ತೃಪ್ತಿಕರವಾದ ರೀತಿಯಲ್ಲಿದೆ; ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲತೆಗಳಿದೆಯೆಂದು ಕಂಡಿರಬೇಕು. ಇಲ್ಲದಿದ್ದರೆ ಈ ಚಿಕ್ಕ ದೊಂದು ಬೋರ್ಡಿಂಗ್ ಮನೆಯಲ್ಲಿ ಸುಮಾರು 170 ವಿದ್ಯಾರ್ಥಿಗಳಿರುವದನ್ನು ಕಂಡೂ ಯೋಗ್ಯ ವ್ಯವಸ್ಥೆ ಮಾಡಿಸವೆ ಇರುವದರ ಅರ್ಥವೇನು? ಈ ಅವ್ಯವಸ್ಥೆಯಿಂದಾಗಿ ಬೋರ್ಡಿಂಗ್ ವಿದ್ಯಾರ್ಥಿಗಳ ಆರೋಗ್ಯವು ಕೆಡುತ್ತಿದೆಯೆಂಬುದು ಈ ಅಲ್ಪ ಅವಧಿಯ ಅನುಭವದಿಂದಲೇ ತಿಳಿದು ಬಂದಿದೆ. ಮುಂದಿನ ನಾಗರೀಕರಾದ ಈ ಬಾಲಕರ ಹಿತವನ್ನು ಕಾಯುವ ಹೊಣೆ ಸರಕಾರಕ್ಕಿಲ್ಲವೇ?

ಉಪಾಧ್ಯಾಯರ ತರಬೇತು ಶಾಲೆಯ ಸ್ಥಿತಿ ಇನ್ನೂ ಶೋಚನೀಯವಾದುದು. ತರಬೇತು ಪಡೆಯಲು ಬಂದ ಅಧ್ಯಾಪಕರಿಗೆ ವಾಸಕ್ಕೆ ವ್ಯವಸ್ಥೆ ಇಲ್ಲ. ಯೋಗ್ಯ ಪಾಠದ ವ್ಯವಸ್ಥೆಯೂ ಪೂರ್ಣವಾಗಿಲ್ಲ. ದಿನಕೊಬ್ಬರಂತೆ ಅಧ್ಯಾಪಕರು. ಹೆಸರಾದ ಮಡಿಕೇರಿ ಹೊಟೆಲುಗಳಲ್ಲಿ ಊಟ ಮಾಡಿಕೊಂಡು ಶಾಲೆಗೆ ಬರಬೇಕು! ಹೆಚ್ಚೇಕೆ? ಇದರಲ್ಲಿ ಒಂದು ಕಟ್ಟು ನಿಟ್ಟಿಲ್ಲ; ಒಂದು ವ್ಯವಸ್ಥೆ ಇಲ್ಲ. ತರಬೇತು ಹೊಂದಲು ಬಂದ ಈ ಅಧ್ಯಾಪಕರಿಗೆ ಯೋಗ್ಯ ಅನುಕೂಲತೆ ಇಲ್ಲದ ಕಾರಣದಿಂದಲೇ ಕೆಲವರು ತರಬೇತು ಶಾಲೆಯನ್ನು ಬಿಟ್ಟಿರುವರು. ಹಲವರು ಬಿಡುವ ಮನೀಷೆಯಲ್ಲಿರುವರು! ತರಬೇತು ಶಾಲೆಯೊಂದನ್ನು ತೆರೆದುಬಿಡುವದೊಂದರಿಂದಲೇ ಸರ್ವ ಕಾರ್ಯಗಳೂ ಸಫಲವಾದುವೆಂದು ಮೇಲಧಿಕಾರಿಗಳ ಭಾವನೆಯೇ?

ಶಾಲೆಗಳಲ್ಲಿ ಮಕ್ಕಳಿಗೆ ಬೋಧನೆ ಮಾಡುವ ಅಧ್ಯಾಪಕರ ವಿಚಾರ ಅವಲೋಕಿಸಿದರೆ ಕೊಡಗಿನ ವಿದ್ಯಾ ಪ್ರಗತಿಯ ಭವಿಷ್ಯವು ಆಶಾದಾಯಕವಾಗಿ ಕಂಡುಬರುವದಿಲ್ಲ. ಹೈಸ್ಕೂಲುಗಳಲ್ಲಿ ಐಚ್ಛಿಕ ವಿಷಯಗಳನ್ನು ಬೋಧಿಸಲು ಅಧ್ಯಾಪಕರ ಕೊರತೆಯೊಗತೊಡಗಿದೆ. ಪ್ರಾಥಮಿಕ ಶಾಲೆಗಳಲ್ಲಿಯ ಸ್ಥಿತಿ ಶೋಚನೀಯವಾಗಿದೆ. ಲೋವರ್ ಸೆಕೆಂಡರಿ ಪಾಸಾಗಿ ಎರಡ್ಮೂರೇ ವರ್ಷ ಮನೆಯಲ್ಲಿದ್ದು ಕಲಿತದ್ದೆಲ್ಲವೂ ತುಕ್ಕು ಹಿಡಿದ ಕಬ್ಬಿಣದಂತೆ ಮಣ್ಣು ಪಾಲಾಗಿರುವವರನ್ನು ಈ ಅಧ್ಯಾಪಕರನ್ನಾಗಿ ನೇಮಿಸಿದರೆ ವಿದ್ಯೆ ಕಲಿಯುವ ಮಕ್ಕಳ ಪುರೋಭವೃದ್ಧಿ ಹೇಗಾಗಬೇಕು? ಸೈನ್ಯ ಇಲಾಖೆಯಲ್ಲಿ ಧಾರಾಳ ಸಂಬಳ ದೊರೆಯುವಾಗ ಜಿಲ್ಲಾ ಬೋರ್ಡಿನ ಯೂ ಸರಕಾರದ ವಿದ್ಯಾ ಇಲಾಖೆಯ ಅಧ್ಯಾಪಕರಿಗೆ ಕೊಡುವ ವೇತನಕ್ಕೆ ಸರಿಯೂದ ಜನರೇ ದೊರೆಯುತ್ತಿದ್ದಾರೆನ್ನುವಾ! ಆದರೆ ಈ ಜರ್ಜರೀಕೃತಗೊಪ್ಪಿಸಲ್ಪಟ್ಟಿರುವ ಮುಂದಿನ ಜನಾಂಗವು ಕಾಯೂ, ವಾಚಾ, ಮನಸುಗಳಲ್ಲಿ ದೃಷ್ಟ, ಪುಷ್ಟವಾಗಿ ಬೆಳೆಯಬಲ್ಲುದೇ? ದುಡ್ಡಿನ ಬೆಲೆ ಇಂದು ಬಹು ಮಟ್ಟಿಗೆ ಇಳಿದು ಹೋಗಿದೆ. ಹಿಂದೆ ನಾಲ್ಕಾಣೆಯ ಕೊಂಡುಕೊಳ್ಳುತ್ತಿದ್ದ ವಸ್ತುವನ್ನು ಇಂದು ರೂ ಪಾಯಿಯು ಕೊಳ್ಳಲಾರದು. ನೀತಿ, ಧರ್ಮ, ಆಚಾರ, ಸ್ವನಹಾರಗಳೆಲ್ಲವೂ ದುಡ್ಡಿನಲ್ಲಿ ನಿಂತಿರುವ, ಯೂಕೆ? ದೇವರನ್ನೇ ಸಿಂಹಾಸನದಿಂದ ತಳ್ಳಿ ದುಡ್ಡು ಸಿಂಹಾಸನವನ್ನೇರಿ ಪೂಜೆಗೊಳ್ಳುತ್ತಿರುವ ಈ ಕಾಲದಲ್ಲಿ ಸರ್ವದಕ್ಕೂ ದುಡ್ಡಿನ ದೃಷ್ಟಿಯಿಂದಲೇ ಗಾರವ. ಆನೈತಿಕವಾದುದಾದರೂ, ರಾಷ್ಟ್ರಘಾತುಕವಾದುದಾದರೂ ಹೆಚ್ಚು ದುಡ್ಡು ದೊರೆಯುವುದಾದರೆ ಅದೇ ಯೋಗ್ಯವುದ್ಯೋಗ. ಜನತೆಯ ಮನವು ಈ ರೀತಿ ಇರುವಾಗ ಅಧ್ಯಾಪಕ ವೃತ್ತಿ ಧಾರ್ಮಿಕವಾದುದು, ರಾಷ್ಟ್ರಹಿತಕರವಾದುದು ಎಂದು ಯೋಚಿಸಿ ಸಿಕ್ಕಿದ್ದರಿಂದ ತೃಪ್ತಿಗೊಂಡು ಮಕ್ಕಳ ಹಿತಕ್ಕಾಗಿ ಶ್ರಮಿಸುವ ಅಧ್ಯಾಪಕರು ಎಲ್ಲಿ? ಅವರೆಲ್ಲ ಹಿಂದಿನ ಧಾರ್ಮಿಕ ಭಾರತದಲ್ಲಿ! ಪಾಶ್ಚಾತ್ಯ ಸಂಸ್ಕೃತಿಯ ಸುಂಟರಗಾಳಿಯಲ್ಲಿ ದುಡ್ಡಿನ ಹುಚ್ಚು ಕಿಚ್ಚಾಗಿ ದಹಿಸುತ್ತಿರುವಾಗ ಈ ಬಡಪಾಯಿಗಳಿಗೆ ಸ್ಥಾನವಿಲ್ಲ. ಹಿಂದೂದೇಶದ ಬ್ರಿಟಿಷ್ ಪ್ರಾಂತ್ಯಗಳಲ್ಲಿ ವಿದ್ಯೆಯ ವಿಚಾರದಲ್ಲಿ ಅಗ್ರಸ್ಥಾನ ಪಡೆದಿದ್ದ ಕೊಡಗು ನೋಲೆ ವಿವರಿಸಿದ ರೀತಿ ಮುಂದರಿಯುವುದಾದರೆ ತನ್ನ ಸ್ಥಾನವನ್ನು ಶೀಘ್ರ ಕಳಕೊಳ್ಳಬೇಕ್ತಾಗುವುದು. ಈ ಭೌತಿಕ ಜಗತ್ತಿನಲ್ಲಿ ನೀತಿಗಾಗಿ, ಪ್ರೀತಿಗಾಗಿ ಹೃಯತ್ನಿಸುವವರು ವಿರಳ. ಅಧ್ಯಾಪಕರೇ ಆಗಲೀ, ವಿದ್ಯಾರ್ಥಿಗಳೇ ಆಗಲಿ, ಅವರವರ ಕಾರ್ಯ ಮಾಡಲು ಒಂದು ಆಕರ್ಷಣೆ ಬೇಕು. ತಾನು ಶ್ರಮಪಟ್ಟರೆ ಯೋಗ್ಯ ಪುರಸ್ಕಾರ, ಸನ್ಮಾನಗಳಿವೆಯೆಂಬ ನಂಬಿಕೆ ಅಧ್ಯಾಪಕರಿಗೆ ಬೇಕು. ನಾನು ಅಧ್ಯಾಪಕನನ್ನು ರಿಸಿದರೆ ನನ್ನನ್ನು ಸನ್ಮಾರ್ಗಕ್ಕೆ ಒಯ್ಯುವನೆಂಬ ಭರವಸೆ ವಿದ್ಯಾರ್ಥಿಗೆ ಬೇಕು. ಇಂದಿನ ಪರಿಸ್ಥಿತಿಯಲ್ಲಿ ಇವೆರಡೂ ತಪ್ಪಿಹೋಗುತ್ತಿವೆ; ಹೋಗಿವೆ. ಸಂಬಂಧಪಟ್ಟ ಅಧಿಕಾರಿಗಳು ಅಧ್ಯಾಪಕರಿಗೆ ತಮ್ಮ ಉದ್ಯೋಗದಲ್ಲಿ ಹೆಚ್ಚು ಮಮತೆ ಹುಟ್ಟುವ ಮಾರ್ಗ ಮೂಡಬೇಕು. ಯೋಗ್ಯ ಪ್ರೋತ್ಸಾಹ ಕೊಟ್ಟು ಸುಶಿಕ್ಷಿತರು ಆ ರಂಗಕ್ಕೆ ಬರುವ ಮಾರ್ಗ ಮೂಡಬೇಕು. ರಾಷ್ಟ್ರದ ಆಧಾರ ಸ್ತಂಭಗಳಾದ ಅಧ್ಯಾಪಕರು ಸುಶಿಕ್ಷಿತರಲ್ಲದೆ ಬಾಯಿಗೆ ಬಂದದ್ದನ್ನು ಕಿರುಚುವ ಕುರಿಗಳ ಹಿಂಡಾದರೆ ಅವರ ಹಿಂಬಾಲಕರಾದ ಮುಂದಿನ ಪೀಳಿಗೆಯ ಗತಿ ಅಧೋಗತಿಯೂದೀತು!

'ವಿದ್ಯಾಭಿಮಾನಿ'

ಮಡಿಕೇರಿ.

ಮಡಿಕೇರಿಯಲ್ಲಿ ಪ್ಲೇಗು ಪ್ರಾರಂಭವಾಗಿ ಒಂದು ವಾರಕ್ಕೆ ಮೊರಿತು. ಭರದಿಂದ ಡಾಕು ಹಾಕುವ ಕೆಲಸವು ನಡೆದಿದೆ. ಆದರೆ ಇಷ್ಟೇ ಸಾಲದು, ಆರೋಗ್ಯ ಇಲಾಖೆಯವರೂ, ಮಡಿಕೇರಿ ಪುರ ಸಭೆಯವರೂ ಇನ್ನಷ್ಟು ನಗರ ನೈರ್ಮಲ್ಯದ ವಿಚಾರದಲ್ಲಿ ಚಾಗರೂಕರಾಗಿರುವದು ಒಳ್ಳೆಯದು. ಮಡಿಕೇರಿ ಪುರ ನೈರ್ಮಲ್ಯವು ತೀರಾ ಅತೃಪ್ತಿಕರವಾಗಿದೆ. ರಸ್ತೆ ಚರಂಡಿಗಳ ವ್ಯವಸ್ಥೆ ಇರಲಿ, ಕಸದ ಡಬ್ಬಗಳಲ್ಲಿ ತುಂಬಿರುವ ಕಸವನ್ನು ದೂರ ಸಾಗಿಸದೆ ಅದು ಅಲ್ಲೇ ಕೊಳೆತು ನಾರುತ್ತಿದೆಯೆಂದರೆ ಬೇರೆ ಮಾತೇಕೆ? ಕೃಷ್ಣ ಭವನದ ಹಿಂದುಕಡೆಯಲ್ಲಿ ಹರಿಯುವ ಗಟಾರವು ಆ ರಸ್ತೆಯನ್ನೇ ಜನರ ಓಡಾಟಕ್ಕೆ ಅಯೋಗ್ಯವನ್ನಾಗಿ ಮಾಡಿದೆ. ಮಾನ್ಯ ಪುರಪಿತಾಮಹರು ಆ ಮಾರ್ಗವಾಗಿಯೇ ತಮ್ಮ ಖಚೇರಿಗೆ ಹೋಗುತ್ತಾರೆ. ಹೀಗಿದ್ದರೂ ಅವರ ದೃಷ್ಟಿ ಆ ಹೊಲಸಿನ ಬಗ್ಗೆ ಹರಿದಿಲ್ಲವೇ? ಪುರದ ನೈರ್ಮಲ್ಯದ ಬಗ್ಗೆ ಸಂಬಂಧಪಟ್ಟ ಇಲಾಖೆಯರೂ ಪುರ ಸಭೆಯವರೂ ಶ್ರಮ ವಹಿಸಬೇಕು. ಮುಂಬರುವದು ಬೇಸಿಗೆಯಲ್ಲವೇ? ಈಗ ಶ್ರಮ ವಹಿಸದಿದ್ದರೆ ಈಗಲೇ ಕಾಯಿಲೆಯ ಮನೆಯೊಗಿರುವ ಮಡಿಕೇರಿಯು ನಾನಾ ರೋಗಗಳ ಆಗರವಾದೀತು.

"ಪುರನಿವಾಸಿ"

ಮೊರಾಟಕ್ಕಿದೆ.

ಮಡಿಕೇರಿ ಸ್ಕೂಲ್ ರಸ್ತೆಯಲ್ಲಿ ಉಳ್ಳವಾರನ ಲೇಟ್ ಅಪ್ಪಯ್ಯನವರ ಮಕ್ಕಳು ಗಣಪತ್ತಿ, ಮೂವಯ್ಯನವರ ಹೆಸರಿನಲ್ಲಿ ಜನೂಬಂದಿ ನಡೆದುಬರುವ ಈ ಕೆಳಗಿನ ಸೊತ್ತುಗಳು ವಿಕ್ರಯಿಸಲ್ಪಡುತ್ತವೆ.

ಒಂದು ಬಂಗ್ಲೆ, ಅಡಿಗೆ ಮನೆ, ಔಟ್ ಹೌಸ್, ಕಕ್ಕಸ್ ಮನೆ, ಪಂಪು, ಬಾವಿ ಸಹಿತವಿದೆ.

ಖಾಯಿಸ್ ಪಡುವವರು ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆದು ಯೂ ಕುದ್ದು ವಿಚಾರಿಸಿ ತಿಳಿದುಕೊಳ್ಳಬಹುದು.

'X'

C/o. "ಕೊಡಗು",
ಮಡಿಕೇರಿ.

4-4

WANTED.

An Estate writer with the knowledge of Accountancy and type writing on a salary of Rs. 50/- with dearness allowance of Rs. 15/- per month. An increment of Rs. 5/- per year will be given on the merits of the work turned out. Free accomodation will be given.

For further particluars please apply to:-

P. Kunhi Kannan,

Perumbubetta Estate,
8-8 POLLIBETTA.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

38) ಸ್ಥಾಪನೆ:—೧೮೭೪.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ	೯೭,೩೭,೦೦೦ ರೂ. ಮೊರಿದೆ
	ಚಾಲ್ತಿಯಿಡುವ ವಿಮೆಗಳು	೮,೪೪,೪೪,೦೦೦ ,, ,,
	ಆಸ್ತಿ	೬,೩೦,೪೬,೦೦೦ ,, ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು		೪,೩೮,೦೦,೦೦೦ ,, ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್, ಕೆಂಪೇಗೌಡ ರಸ್ತೆ, ಬೆಂಗಳೂರು.	ಅರ್ಜಿಗಳನ್ನು ಸ್ವಾಗತಿಸಿದೆ.	ಎಂಪೈರ್ ಆಫ್ ಇಂಡಿಯಾ ಲೈಫ್ ಬಿಲ್ಡಿಂಗ್ ಬೊಂಬಾಯಿ

"ಟ್ರಾಪಿಕಲ್"

ಕಂಪೆನಿಯಲ್ಲಿ ವಿಮೆ ಮಾಡುವದೇ

ಯೋಗ್ಯವೆಂದು ನಿಮ್ಮ **1944** ರ ತೀರ್ಮಾನವಾಗಲಿ

1943ರಲ್ಲಿ ಮಾಡಿದ ವಿಮಾ ಮೌಲ್ಯ ರೂ. 91,99,125.

ಹಿಂದೂದೇಶದ ಹಿರಿದಾದ ರಾಷ್ಟ್ರೀಯ ಕಂಪೆನಿ.

ಮುಖ್ಯ ಖಚೇರಿ: ಹೊಸ ಡಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:-

ಯೆಂ. ಯಂ. ಅಚ್ಚಣ್ಣ, ಮಡಿಕೇರಿ. } ಅಥವಾ { ಯೆಂ. ರಂಗೆನಾಥಶೆಟ್ಟಿ ಬ್ರಾಂಚ್ ಮೇನೇಜರ್, ಮಂಗಳೂರು.

33)

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್ ಲಿ., ಮಡಿಕೇರಿ

ಕೋ.ಆಪರೇಟಿವ್ ಸೊಸೈಟೀಸ್ ಛಿಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1921ರಲ್ಲಿ ಸ್ಥಾಪಿತವಾಗಿದೆ.)

ವಸೂಲಾದ ಶೇರ್ ಮೊಬಲಗು 95,060, ಜಮೂಬಂದ ಠೇವಣಾತಿ 2,24,755, ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ 1 ವರ್ಷದಿಂದ 3 ವರ್ಷಗಳ ವರೆಗೆ ಶೇಕಡ 2. 3 ವರ್ಷಗಳಿಂದ 5 ವರ್ಷಗಳ ವರೆಗೆ 2½. 5 ವರ್ಷಗಳಿಂದ 10 ವರ್ಷಗಳ ವರೆಗೆ 3½. 10 ಮತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇ 0-8-0.

ವರ್ಷಕ್ಕೊಮ್ಮೆ ರಿಜಿಸ್ಟ್ರಾರವರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.